# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 06-02-2021 ರಂದು ನಡೆದ ಸಭೆಯ ನಡವಳಿಗಳು**

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: **ಬಿ12(5)ಪಿಆರ್/35/2020-21/21-09-2020** ರ ಆದೇಶದಂತೆ ದಿನಾಂಕ: 06-02-2021 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ **ಕೆನೋಪೀಯಾ ಹೋಟೆಲ್, ಪಿ.ಯು ಕಟ್ಟಡ 2 ಮಹಡಿ** ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಸಭೆಯು ದಿನಾಂಕ: 06-02-2021 ರಂದು ನಡೆಯಿತು.

## ಸಭೆಗೆ ಹಾಜರಿದ್ದವರ ವಿವರಗಳು

1) ಮಾನ್ಯ ಶ್ರೀ.ಎನ್.ಎ ಹ್ಯಾರಿಸ್, ಶಾಸಕರು, ಶಾಂತಿನಗರ ವಿಧಾನ ಸಭಾ ಕ್ಷೇತ್ರ . ಅಧ್ಯಕ್ಷರು
2) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
3) ಶ್ರೀ. ಮೂರ್ತಿ, ವಾರ್ಡ್ ಸಮಿತಿಯ ಕಾರ್ಯದರ್ಶೀ ,ಸಹಾಯಕ ಕಂದಾಯ ಅಧಿಕಾರಿ (ದೊಮ್ಮಲೂರು), ಸಹಾಯಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
4) ವಾರ್ಡ್ ಸಮಿತಿ ಸದಸ್ಯರಾದ, ಶ್ರೀಮತಿ. ಆಶಾ ಆಲ್ವಿನ್ ಶ್ರೀ. ರಮೇಶ್ ರೆಡ್ಡಿ, ಶ್ರೀ. ಗಜರಾಜ .ಶ್ರೀ. ಉಮೇಶ್, ಶ್ರೀಮತಿ. ಗಾಯಿತ್ರಿ, ಶ್ರೀ. ಹೇಮಂತ್ ನಾಗಾ, ಶ್ರೀನಿವಾಸ ನಾಯ್ಡು, ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರು ಮತ್ತು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ ದಿನಾಂಕ: 22-01-2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಯನ್ನು ನೋಡೆಲ್ ಅಧಿಕಾರಿಯವರು ಸಂಕ್ಷಿಪ್ತವಾಗಿ ಓದುತ್ತಾ .ಒಂದೊಂದು ವಿಷಯವನ್ನು ಹಾಗೂ ಅದರ ಕ್ರಮ ತೆಗೆದುಕೊಂಡಿರುವ ಬಗ್ಗೆ ಚರ್ಚಿಸಲಾಯಿತು.

# ದಿನಾಂಕ 06.02.2021 ರಂದು ಜೋಗುಪಾಳ್ಯ ವಾರ್ಡ್ ಸಂಖ್ಯೆ:89

## ಸದಸ್ಯರ ಸಭೆಯಲ್ಲಿ ಚರ್ಚಿದಂತ ಪ್ರಮುಖ ವಿಷಯಗಳು

1. ಜೋಗುಪಾಳ್ಯ ಸಿಟಿಜೆನ್ ಗ್ರೂಪ್ (RWA) ರವರು ದೂರಿನ ವಾರ್ಡಿನ ಸಮಸ್ಯೆ ಬಗ್ಗೆ ಮನವಿ ಪತ್ರ ಸಭೆಯಲ್ಲಿ ಸಲ್ಲಿಸಿದರು ಈ ಕೆಳಕಂಡಂತೆ ಮನವಿ ಪತ್ರದಲ್ಲಿ ಸಮಸ್ಯೆಗಳು ವಾರ್ಡಿನಲ್ಲಿ ಇರುತ್ತದೆ.

   A) ಸಲ್ಲಾಪುರಿಯ ಕೇಂಬ್ರಿಡ್ಜ ರೆಸಿಡೆನ್ಸಿ ಅಪಾರ್ಟ್‌ಮೆಂಟ್ ಈ ಜೋಗುಪಾಳ್ಯ ವಾರ್ಡಿನಲ್ಲಿದ್ದು ಈ ಅಪಾರ್ಟ್‌ಮೆಂಟ್ ಹಿಂಬದಿಯಲ್ಲಿ ಕೃತಿ ಡೆವಲಪರ್ಸ್ ರವರು ಕಟ್ಟುತ್ತಿರುವ ಹೊಸ ಅಪಾರ್ಟ್‌ಮೆಂಟ್‌ನಲ್ಲಿ ಬಿಬಿಎಂಪಿ ಬೈಲಾ ಪ್ರಕಾರ ಕಟ್ಟಡವನ್ನು ಕಟ್ಟದೆ ಉಲ್ಲಂಘನೆ ಮಾಡಿರುತ್ತಾರೆ . ಅಪಾರ್ಟ್‌ಮೆಂಟ್ಸ್ ಕಟ್ಟುವಾಗಲೂ ಕೆಲಸ ಸಮಯವನ್ನು ಸಹ ನೋಡದೆ ತಡ ರಾತ್ರಿಯಲ್ಲಿ ಅಕ್ಕಪಕ್ಕ ಸಾರ್ವಜನಿಕರಿಗೆ ತೊಂದರೆ ಕೊಟ್ಟು ಕೆಲಸವನ್ನು ಮಾಡಿರುತ್ತಾರೆ. ಸುರಕ್ಷತೆಯ ಕ್ರಮ, ಕಟ್ಟಡದ ಬಿಬಿಎಂಪಿ ಪ್ಲಾನ್ ಪ್ರಕಾರ ಕಟ್ಟಡದ ಬೈಲಾ ಉಲ್ಲಂಘನೆ ಮಾಡಿರುತ್ತಾರೆ.

   B) ಸಲ್ಲಾಪುರಿಯ ಕ್ರೇಂಬ್ರಿಡ್ಜ ರೆಸಿಡೆನ್ಸಿ ಅಪಾರ್ಟ್‌ಮೆಂಟ್ ದಕ್ಷಿಣದ ಪಕ್ಕದಲ್ಲಿ ಹೊಸದಾಗಿ ಕಟ್ಟುತ್ತಿರುವ ಅಪಾರ್ಟ್‌ಮೆಂಟ್ ದಕ್ಷಿಣ ಗೋಡೆಯ ಉದ್ದಕ್ಕೂ ಕಸವನ್ನು ಸುರಿದಿರುತ್ತಾರೆ. ಅದನ್ನು ತೆರವುಗೊಳಿಸುವುದು. ( AEE ಮತ್ತು AE ರವರು ಕ್ರಮ ವಹಿಸುವುದು.)

2. 7ನೇ ಮುಖ್ಯ ರಸ್ತೆ 1ನೇ ಕ್ರಾಸ್‌ನಲ್ಲಿ ಇರುವ ಮೂಲೆ ನಿವೇಶನದಲ್ಲಿ ನಿಶ್ಚಲವಾಗಿ ನೀರು ನಿಂತಿದ್ದು ಇದರಿಂದ ಅಕ್ಕಪಕ್ಕದವರಿಗೆ ಸೊಳ್ಳೆಗಳ ಕಾಟ ಬಹಳವಾಗಿರುತ್ತದೆ ( ಆರೋಗ್ಯ ಅಧಿಕಾರಿಯವರು ಕ್ರಮ ವಹಿಸುವುದು).

3. 7ನೇ ಮುಖ್ಯ ರಸ್ತೆಯಲ್ಲಿ BWSSB ಯವರು ಕಾಮಗಾರಿ ಮಾಡುವಾಗ ಗುಂಡಿಗಳನ್ನು ತೋಡಿದ್ದು ಈ ರಸ್ತೆಯು ಹಾಳಾಗಿರುತ್ತದೆ. ಮತ್ತು ಈ ರಸ್ತೆಯು FOOTPATH ನಲ್ಲಿರುವ ಅವಶೇಷಗಳು (Debris)ಗಳನ್ನು ತೆರವುಗೊಳಿಸಿರುವುದು.

   ( AEE BWSSB ಮತ್ತು AEE, AE ಬಿಬಿಎಂಪಿ ಕ್ರಮವಹಿಸುವುದು.)

4. ಜೋಗುಪಾಳ್ಯ ಮುಖ್ಯರಸ್ತೆ FOOTPATH ನ್ನು ತಳ್ಳುಗಾಡಿಯವರು ಆಕ್ರಮಿಸಿಕೊಂಡಿದ್ದು ಪಾದಚಾರಿಗಳು FOOTPATH ನಲ್ಲಿ ನಡೆಯಲಿಕ್ಕೆ ತೊಂದರೆಯಾಗುತಿದ್ದು ಆದ್ದರಿಂದ ಮುಖ್ಯರಸ್ತೆಯಲ್ಲಿ ತಳ್ಳೊ ಗಾಡಿಗಳನ್ನು ತೆರವುಗೊಳಿಸುವುದು.

   (AEE, AE ಆರೋಗ್ಯ ಪರಿವೀಕ್ಷಣಾ (INSPECTOR)ಆರಕ್ಷಕ ಸಿಬ್ಬಂದಿ, ಕ್ರಮವಹಿಸುವುದು.

5. ಒಣಕಸ ಪ್ರತ್ಯೇಕತೆ ಕೇಂದ್ರವನ್ನು ವಾರ್ಡಿನಲ್ಲಿ ಈಗಾಗಲೇ ವಾರ್ಡ್ ಅಫೀಸ್‌ನಲ್ಲಿ ಸ್ಥಾಪಿಸುವ ಬಗ್ಗೆ.

   (AEE SWM ಕ್ರಮವಹಿಸುವುದು.)

6. 13ನೇ ಮುಖ್ಯರಸ್ತೆ ಇಂದಿರಾನಗರ ರಸ್ತೆಯನ್ನು Oneway ಮಾಡುವ ಬಗ್ಗೆ ಮತ್ತು 7ನೇ ಮುಖ್ಯರಸ್ತೆಯಿಂದ ಬರುವ ವಾಹನಗಳು 13ನೇ ರಸ್ತೆಗೆ ತಿರುವು ಪಡೆದುಕೊಳ್ಳುವ ಮಾರ್ಗದಲ್ಲಿ ವಿಭಜಕ(Divder) ಅಳವಡಿಸುವ ಬಗ್ಗೆ.

(ಆರಕ್ಷಕ ಸಿಬ್ಬಂದಿಯವರು ಕ್ರಮ ವಹಿಸುವುದು.)

7. 15ನೇ ಮುಖ್ಯರಸ್ತೆ ಈಶ್ವರ್ ಲೇಔಟ್ ರಸ್ತೆಯು ಬಹಳ ಹದಗೆಟ್ಟಿದ್ದು, ರಸ್ತೆಯಲ್ಲಿರು ಅವಶೇಷವನ್ನು (Dabris) ತೆರವುಗೊಳಿಸುವುದು ಹಾಗೂ ರಸ್ತೆಗೆ ಟಾರ್‌ಹಾಕುವ ಬಗ್ಗೆ.
8. Bescom ರವರು ಕಾಮಗಾರಿ ಮಾಡುವಾಗ ಮರದ ಕೊಂಬೆಗಳನ್ನು ರಸ್ತೆಯಲ್ಲಿ ಹಾಕಿದ್ದು ಅದನ್ನು ತೆರವುಗೊಳಿಸುವುದು. (ಬಿಬಿಎಂಪಿ ಅರಣ್ಯರವರು ಕ್ರಮ ವಹಿಸುವುದು)
9. ಮೈನ್ ಚಾನಲ್ ರಸ್ತೆಯಲ್ಲಿ ರಾಜಕಾಲುವೆಯಲ್ಲಿ ಹೊಳ್ಳೆತ್ತುವ ಕಾರ್ಯವನ್ನು ಕೈಗೊಂಡು ರಾಜಕಾಲುವೆಯಲ್ಲಿ ಕೊಳಚೆ ನೀರು ಸರಾಗವಾಗಿ ಹರಿಯುವುದಕ್ಕೆ ಕ್ರಮಗೊಳ್ಳುವುದು.ಹಾಗೂ ಒಡೆದು ಹೋಗಿರುವ ತಡೆಗೋಡೆಯನ್ನು ಸರಿಪಡಿಸುವುದು.

   (AEE Strom Water Drain ರವರು ಕ್ರಮ ವಹಿಸುವುದು)
10. ಸಿ ನಾಗರಾಜು ವಾರ್ಡ್‌ನ ನಾಗರೀಕರು ವಾರ್ಡ್‌ನಲ್ಲಿ ಸಿಸಿ ಟಿವಿ ಯನ್ನು ಹಾಕಿಸಬೇಕು ಹಾಗು ಬೆಂಗಳೂರು ಒನ್ ಅನ್ನು ಸ್ಥಾಪಿಸಬೇಕು ಎಂದು ಮನವಿಯನ್ನು ಸಲ್ಲಿಸಿದ್ದಾರೆ.

   ( AEE ಮತ್ತು AE ರವರು ಕ್ರಮ ವಹಿಸುವುದು.)
11. ಕೆ ರಮೇಶ್‌ರಡ್ಡಿ ವಾರ್ಡಿನ ಸ್ಥಮಿತಿ ಸದಸ್ಯರು ಹಿಲತೇ ತೋಪು ರಸ್ತೆಯಲ್ಲಿ ಕಾಂಕ್ರೀಟ್‌ನ್ನು ಹಾಕಿಸಬೇಕು ಮತ್ತು ಅಲ್ಲಿ ಕಟ್ಟಿನಿಂತಿರುವ ಬೋರ್‌ವೆಲನ್ನು ಸರಿಪಡಿಸಬೇಕೆಂದು ಮನವಿಯನ್ನು ಸಲ್ಲಿಸಿದ್ದಾರೆ.
12. ಕೆ ರಮೇಶ್‌ರಡ್ಡಿ ವಾರ್ಡಿನ ಸ್ಥಮಿತಿ ಸದಸ್ಯರು ಜಿ ನಂ 12ನೇ ಹಾಗು 5ನೇ ರಸ್ತೆ ಕಾಂಕ್ರೀಟ್ ಹಾಕಬೇಕೆಂದು ಮನವಿಯನ್ನು ಸಲ್ಲಿಸಿದ್ದಾರೆ.

   ( AEE ಮತ್ತು AE ರವರು ಕ್ರಮ ವಹಿಸುವುದು.)

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ನೊಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ**
**ಸಹಾಯಕ ಅಭಿಯಂತರರು**
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು,</u>

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ